ಕಲೆಗಳ ಮೇಲೆ ಅಂಟಿಸಬೇಕು. ಅರ್ಧ ತಾಸು ಕಳೆದ ಮೇಲೆ ತಣ್ಣೀರಿನಲ್ಲಿ ತೊಳೆಯುವುದು ಅಗತ್ಯ. ಮ್ಯಾಶ್ ಮಾಡಿದ ಆಲೂಗೆಡ್ಡೆ, ಟೊಮ್ಯಾಟೊ ರಸ, ಜೇನುಗಳ ಸಮ್ಮಿಶ್ರಣ ಕೂಡ ಮುಖದ ಕಲೆ ನೀಗಲು ಪರಿಣಾಮಕಾರಿ ಲೇಪನ.

ಈರುಳ್ಳಿ ರಸದಲ್ಲಿ ಚರ್ಮದ ಮೇಲೆ ಕಲೆ ಮೂಡಿಸುವ ಸೂಕ್ಷ್ಮಾಣುಗಳನ್ನು ನಾಶಪಡಿಸುವ ಗಂಧಕದಂತಹ ಸತ್ವಗಳಿವೆ. ಅದನ್ನು ಕತ್ತರಿಸಿದ ಸ್ಲೈಸ್‌ಗಳನ್ನು ಕಲೆಗಳ ಮೇಲೆ ಅಂಟಿಸಿ ಬಳಿಕ ತೊಳೆದುಕೊಳ್ಳುವ ಕ್ರಮದಿಂದಲೂ ಕಲೆಗಳು ಶಮನವಾಗುತ್ತವೆ. ಹಾಗೆಯೇ ಶಿಲೀಂಧ್ರನಾಶಕ ಗುಣ ಹೊಂದಿದ ಬೆಳ್ಳುಳ್ಳಿ ಯೂ ಕಲೆ ನಿವಾರಿಸಲು ಉಪಯುಕ್ತವೆನಿಸಿದೆ. ಒಂದು ಚಮಚ ಉಳ್ಳಾಗೆಡ್ಡೆ ರಸ, ಒಂದು ಚಮಚ ಬೆಳ್ಳುಳ್ಳಿ ರಸ, ಅರ್ಧ ಚಮಚ ವಿನೆಗರ್ ಬೆರೆಸಿ ಇಪ್ಪತ್ತು ನಿಮಿಷ ಕಲೆಗಳ ಮೇಲೆ ಉಜ್ಜಿ ಅನಂತರ ಥಂಡಿ ನೀರಿನಲ್ಲಿ ತೊಳೆಯ ಬೇಕು. ಕೆಲವು ದಿನ ಹೀಗೆ ಉಪಚರಿಸಿದರೆ ಸಾಕು.

ಮಜ್ಜಿಗೆ–ಮೊಸರು

ಮಜ್ಜಿಗೆಯಲ್ಲಿರುವ ಲ್ಯಾಕ್ಟಿಕ್ ಮತ್ತು ಹೈಡ್ರಾಕ್ಸಿಲ್ ಆಮ್ಲಗಳು ಚರ್ಮದ ಮೇಲೆ ಅದನ್ನು ಲೇಪಿಸಿದರೆ ಹೆಚ್ಚುವರಿ ತೈಲವನ್ನು ಹೀರಿ ಕೊಂಡು ಸತ್ತ ಜೀವಕೋಶಗಳ ಕೊಳೆಯನ್ನು ನಿವಾರಿಸಲು ಸಮರ್ಥವಾಗಿವೆ. ಅದರೊಂದಿಗೆ ಲಿಂಬೆ ರಸವೂ ಸೇರಿದರೆ ಕಲೆಗಳನ್ನು ಕಳೆಯಲು ಸಹಾಯಕ. 4 ಚಮಚ ಮಜ್ಜಿಗೆ, 2 ಚಮಚ ಟೊಮ್ಯಾಟೊ ರಸದ ಮಿಶ್ರಣವನ್ನು ಲೇಪಿಸಿ ಹದಿನೈದು ನಿಮಿಷ ಒಣಗಲು ಬಿಡಿ. ಬಳಿಕ ಬಿಸಿನೀರಿನಲ್ಲಿ ತೊಳೆದುಕೊಳ್ಳುವುದರಿಂದ ತ್ವಚೆಯ ಕಾಂತಿ ವರ್ಧಿಸುತ್ತದೆ. ಮಜ್ಜಿಗೆ ಬದಲಿಗೆ ಕೆನೆ ಹಾಲಿನಲ್ಲಿ ಹತ್ತಿಯನ್ನು ನೆನೆಸಿ ಕಲೆಗಳ ಮೇಲೆ ಅಂಟಿಸಿ ಒಣಗಿದ ಬಳಿಕ ತೊಳೆಯಬೇಕು. ಬೇಕಿದ್ದರೆ ಇದಕ್ಕೆ ಜೇನನ್ನೂ ಸೇರಿಸಬಹುದು. ದಿನಕ್ಕೆರಡು ಸಲ ಮೂರು ವಾರ ಈ ಚಿಕಿತ್ಸೆ ಮಾಡಿದರೆ ಸಾಕು.



ಚರ್ಮದ ಕಲೆ ಕಳೆಯುವ ಕಿಣ್ವಗಳು ಹುಳಿ ಮೊಸರಿನಲ್ಲಿ ಹೇರಳವಾಗಿವೆ. ಎರಡು ಚಮಚ ಮೊಸರು, ಒಂದು ಚಮಚ ಜೇನಿನ ಮಿಶ್ರಣವನ್ನು ದಿನಕ್ಕೆರಡು ಸಲ ಲೇಪಿಸಿ ಹಗುರವಾಗಿ ತಿಕ್ಕಿ ಅರ್ಧ ತಾಸಿನ ಬಳಿಕ ತೊಳೆಯುವ ಕ್ರಮವೂ ಕಲೆ ನಿವಾರಣೆಗೆ ಸೂಕ್ತ ಚಿಕಿತ್ಸೆ. ಮೊಸರು, ಸಾಸಿವೆಯ ಹುಡಿ, ಅಲೊವೆರಾ ಜೆಲ್, ಸ್ವಲ್ಪ ಅರಶಿನದ ಪುಡಿಗಳನ್ನು ಒಟ್ಟಾಗಿ ಕಲಸಿದ ಲೇಪನವೂ ಕಲೆ ಪರಿಹಾರಕ್ಕೆ ನೆರವಾಗುವುದು.

ಶ್ರೀಗಂಧ

ಚರ್ಮದ ಮೇಲೆ ಇರುವ ಗಾಯದ ಕಲೆ, ಸುಟ್ಟ ಕಲೆ ಮತ್ತಿತರ ಎಲ್ಲ ಕಲೆಗಳನ್ನೂ ಕಳೆಯಲು ಶ್ರೀಗಂಧ ಉತ್ತಮ ಔಷಧ. ಅರಶಿನದ ಹುಡಿ, ಹಾಲು, ಜೇನು, ಲೈಕೋರಸ್ ಮತ್ತು ಶ್ರೀಗಂಧದ ಹುಡಿಗಳನ್ನು ಹದವಾಗಿ ಪೇಸ್ಟ್ ಮಾಡಿ ಯಾವುದೇ ಕಲೆಗಳ ಮೇಲೂ ಕೆಲವು ದಿನ ಹಚ್ಚಿ ಒಣಗಿದ ಮೇಲೆ ತೊಳೆಯುವ ಕ್ರಮ ಅನುಸರಿಸುವುದು ಕಲೆಮುಕ್ತ ತ್ವಚೆ ಪಡೆಯಲು ನೇರ ಮಾರ್ಗ. ಮಲಗುವ ಮೊದಲು ಶುದ್ಧ ಶ್ರೀಗಂಧದ ಎಣ್ಣೆಯನ್ನು ಕಲೆಗಳ ಮೇಲೆ ಉಜ್ಜುವುದರಿಂದಲೂ ಕಲೆ ನೀಗಿಕೊಳ್ಳಬಹುದು. ಗ್ಲಿಸರಿನ್, ಶ್ರೀಗಂಧದ ಹುಡಿ, ಪನ್ನೀರು, ಹಾಲು, ಜೇನುಗಳಿಂದ ತಯಾರಿಸುವ ಪೇಸ್ಟ್ ಲೇಪನ ದಿಂದಲೂ ತ್ವಚೆಯ ಈ ಸಮಸ್ಯೆಗೆ ಪರಿಹಾರವಿದೆ.

ರಾತ್ರಿ ಬಾದಾಮಿಯನ್ನು ನೀರಿನಲ್ಲಿ ನೆನೆಯಲು ಹಾಕಿ, ಬೆಳಗ್ಗೆ ಸಿಪ್ಪೆ ಸುಲಿದು ತೆಗೆದು ಅರೆದು ಜೊತೆಗೆ ಒಂದು ಚಮಚ ಶ್ರೀಗಂಧದ ಹುಡಿ, ಜೇನು ಬೆರೆಸಿ ಸಿದ್ಧವಾಗುವ ಪೇಸ್ಟನ್ನು ಕಲೆಗಳಿಗೆ ಹಚ್ಚಿ ತಿಕ್ಕಬೇಕು. ಮೂವತ್ತು ನಿಮಿಷ ಒಣಗಲು ಬಿಟ್ಟು ಶುದ್ಧವಾದ ನೀರಿನಲ್ಲಿ ಶುಚಿಗೊಳಿಸಬೇಕು.

ಅಲೊವೆರಾದ ತಿರುಳನ್ನು ನೀರಿನಲ್ಲಿ ಹಿಸುಕಿ ತಯಾರಿಸಿದ ಜೆಲ್ ಲೇಪನವನ್ನು ಕಲೆಗಳ ಮೇಲೆ ದಿನಕ್ಕೆರಡು ಸಲ ಮಾಡುವುದರಿಂದ ಒಂದು ತಿಂಗಳಿನಲ್ಲಿ ಕಲೆಗಳ ಅಧಿಪತ್ಯ ವಿರಳವಾಗುತ್ತವೆ. ದಿನಕ್ಕೆರಡು ಸಲ ನೀರಿನಲ್ಲಿ ಅರೆದ ಮೂಲಂಗಿಯನ್ನು ದಪ್ಪವಾಗಿ ಹಚ್ಚಿಕೊಳ್ಳುವುದು ಕೂಡ ಪರಿಣಾಮಕರವಾಗಿದೆ.

ಕೆಂಪು ದ್ರಾಕ್ಷಿಗೆ ಮೆಲನಿನ್ ಕಾರಣದಿಂದ ಉಂಟಾದ ಕಲೆಗಳನ್ನು ನಿವಾರಿಸುವ ಶಕ್ತಿಯಿದೆ. ಅದರ ತಿರುಳು ಮತ್ತು ಜೇನುತುಪ್ಪವನ್ನು ಬೆರೆಸಿ ಕಲೆಗಳ ಮೇಲೆ ಹಚ್ಚುವುದು, ಇಪ್ಪತ್ತು ನಿಮಿಷ ಒಣಗಿದ ಮೇಲೆ ಎಳ ನೀರಿನಲ್ಲಿ ತೊಳೆಯುವುದು ಯೋಗ್ಯವಾದ ಕಲೆ ನಿವಾರಕವಾಗಿದೆ.

ಕೇಸರಿ ದಳಗಳನ್ನು ರಾತ್ರಿ ತಣ್ಣಗಿನ ಹಾಲಿನಲ್ಲಿ ಹಾಕಿ ಫ್ರೀಜರ್‌ನಲ್ಲಿಟ್ಟು ಬೆಳಗಾದ ಮೇಲೆ ಅರೆದು ಲೇಪಿಸುವುದರಿಂದ ಮೊಡವೆಯ ದಟ್ಟ ಕಲೆಗಳು ಕೂಡ ನೀಗಿ ಮುಖ ಪರಿಶುದ್ಧವಾಗುವುದು. ಹರಳೆಣ್ಣೆಯಲ್ಲಿ ನೆನೆದ ಹತ್ತಿಯನ್ನು ಕಲೆಗಳಿಗೆ ಅಂಟಿಸಿ ಕೆಲವು ನಿಮಿಷಗಳ ಬಳಿಕ ಉಜ್ಜಬೇಕು. ಬೆಳಗ್ಗೆ ಮತ್ತು ರಾತ್ರಿ ಈ ಉಪಚಾರದ ಬಳಿಕ ಗುಲಾಬಿ ನೀರಿನಲ್ಲಿ ತೊಳೆಯಬೇಕು. ಹರಳೆಣ್ಣೆಯೊಂದಿಗೆ ವಿಟಮಿನ್ ಇ ಪೂರೈಸುವ ತೆಂಗು, ಆಲಿವ್ ಅಥವಾ ಬಾದಾಮಿ ಎಣ್ಣೆಗಳನ್ನೂ ಸೇರಿಸಿಕೊಳ್ಳಬಹುದು.

ಸಕ್ಕರೆಯಲ್ಲಿರುವ ಗ್ಲೈಕೊಲಿಕ್ ಆಮ್ಲಕ್ಕೆ ತ್ವಚೆಯಲ್ಲಿರುವ ಸತ್ತ ಜೀವಕೋಶಗಳ ಕೊಳೆಯನ್ನು ತೊಡೆದು ಹಾಕುವ ಶಕ್ತಿಯಿದೆ. ಸಕ್ಕರೆಯಿಂದ ತಯಾರಿಸಿದ ದಪ್ಪ ಪಾಕದ ಲೇಪನವೂ ತ್ವಚೆಯ ಕಲೆ ತೆಗೆಯಲು ಸಮರ್ಥವಾಗಿದೆ. ಮೊಡವೆ ನಿವಾರಣೆಗೆ ಬಳಸುವ ಸ್ಯಾಲಿಸಿಲಿಕ್ ಆಮ್ಲದ ಲೇಪನವೂ ಕಪ್ಪು ಕಲೆಗಳ ಪದರವನ್ನು ತೆಗೆಯಲು ಸಹಕರಿಸುತ್ತದೆ.

ದಿನವೂ ಶುದ್ಧವಾದ ನೀರನ್ನು ಹೆಚ್ಚು ಹೆಚ್ಚು ಕುಡಿಯಿರಿ. ಕಲೆಗಳ ನಿವಾರಣೆಗೆ ಇದು ಶೇ. 50ರಷ್ಟು ನೆರವಾಗುತ್ತದೆ. ■




# ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

**ಪಂಡಿತ. ಶ್ರೀ ಗಣೇಶ್ ಕುಮಾರ್** ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

**ಬೆಂಗಳೂರು ಖಾಯಂ ಮನೆ ವಿಳಾಸ** ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

**ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ**

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು **9880444450**

